ನಾವು ಸಂಜೆಯಾಗುವಷ್ಟರಲ್ಲಿ ನಾಲ್ಕು ಬೆಟ್ಟಗಳನ್ನು ಹತ್ತಿ ಇಳಿದಾಗ ಇಡೀ ಬೆಟ್ಟಗಳ ಸಾಲುಗಳು ನಮ್ಮ ಕೆಳಗಿರುವಂತೆ ಕಾಣುತ್ತಿತ್ತು.

ನಮಗಿಂತಲೂ ಮುಂಚೆ ಕೆಲವು ತಂಡಗಳು ಗೋಚಲಾ ಚಾರಣ ಮುಗಿಸಿ ಬರುತ್ತಿದ್ದವು. ಅವರಲ್ಲಿ ವಿದೇಶಿ ಚಾರಣಿಗರೂ ಇದ್ದರು. ಇಂತಹ ರಮಣೀಯ ಪ್ರಕೃತಿಯನ್ನು ಹೊಂದಿರುವ ಭಾರತೀಯರು ಅದೃಷ್ಟವಂತರೆಂದು ಹೊಗಳಿದರು. ಸಂಜೆ 4 ಗಂಟೆಗೆ ಸಾಚೆನ್ ಶಿಬಿರ ತಲುಪಿದೆವು. ಸಂಜೆ ಆರು ಗಂಟೆಗೇ ಕತ್ತಲಾಗುವುದರಿಂದ ಬೇಗನೆ ಊಟ ಮಾಡಿ ಮಲಗಿಕೊಂಡೆವು. ಬೆಳಿಗ್ಗೆ ಉಪಾಹಾರ ಮುಗಿಸಿ ಎರಡನೇ ಶಿಬಿರ ತ್ಶೋಕಾ ಕಡೆಗೆ ಚಾರಣ ಮುಂದುವರಿಸಿದೆವು. ಸಾಚೆನ್–ತ್ಶೋಕಾ ನಡುವೆ ಸಿಗುವ ನದಿಯನ್ನು ದಾಟಲು ತೂಗು ಸೇತುವೆ ನಿರ್ಮಿಸಲಾಗಿದೆ. ನಮ್ಮ ಚಾರಣದಲ್ಲಿ ಕಂಡ ಅತ್ಯಂತ ಎತ್ತರದಿಂದ ಹರಿದು ಬರುವ ನದಿ ಇದಾಗಿತ್ತು. 8 ಕಿ.ಮೀ. ಚಾರಣ ನಡೆಸಿದ ನಂತರ ಬಾಕಿಮ್ ಗ್ರಾಮ ತಲುಪಿದೆವು. ಒಂದು ಗೋಡೆಯಲ್ಲಿ ತೂಗುಹಾಕಲಾಗಿದ್ದ ಸುಮಾರು 2 ಅಡಿ ಅಗಲದ ಮರದ ಅಣಬೆ ಆಕರ್ಷಿಸಿತು. ಅದರ ಮೇಲೆ ಯುಕ್ಸೋಮ್‌ನಿಂದ ಗೋಚಲಾ ನಡುವೆ ಸಿಗುವ ಶಿಬಿರಗಳ ನಕ್ಷೆ, ಸಮುದ್ರ ಮಟ್ಟದಿಂದ ಇರುವ ಎತ್ತರ ಹಾಗೂ ದೂರವನ್ನು ಸೂಚಿಸುವ ನಕ್ಷೆಯನ್ನು ಬಿಡಿಸಿದ್ದರು. ತ್ಶೋಕಾ ಶಿಬಿರ ತಲುಪುವಾಗ ಸಂಜೆ ಐದಾಗಿತ್ತು. ಪಶ್ಚಿಮದಲ್ಲಿ ಮುಗಿಲೆತ್ತರದ ಹಿಮ ಶಿಖರಗಳ ಸಾಲು, ಪೂರ್ವದಲ್ಲಿ ಮುಗಿಲೆತ್ತರಕ್ಕೆ ಬೆಳೆದು ನಿಂತಿದ್ದ ಮರಗಳಿರುವ ಬೆಟ್ಟಗಳ ಸಾಲು... ಇವೆರಡರ ನಡುವೆ ಹಾಕಲಾಗಿದ್ದ ಟೆಂಟ್‌ಗಳಲ್ಲಿ ಅಂದಿನ ನಮ್ಮ ತಂಡದ ವಾಸ್ತವ್ಯ.

ಮರುದಿನ ಬೆಳಿಗ್ಗೆ ತ್ಶೋಕಾದಿಂದ ಫೆಡಾಂಗ್ ಮಾರ್ಗವಾಗಿ ಜೋಂಗ್ರಿ ಶಿಬಿರದ ಕಡೆಗೆ ಸಾಗಿ ದೊಡ್ಡ ದೊಡ್ಡ ಬಂಡೆಗಳಿರುವ ಎರಡು ಬೆಟ್ಟಗಳಲ್ಲಿ ಸಾಗುವ ಚಾರಣ ಸ್ವಲ್ಪ ಕಷ್ಟವೆನಿಸಿತು. ತ್ಶೋಕಾ–ಫೆಡಾಂಗ್ ಹಾದಿಯು ರೋಡೋಡೆಂಡ್ರಾನ್ ಬೆಲ್ಟ್ ಆಗಿದ್ದು, ಅಲ್ಲಲ್ಲಿ ಸಮತಟ್ಟಾದ ಪ್ರದೇಶದಲ್ಲಿದ್ದ ರೋಡೋಡೆಂಡ್ರಾನ್ ಮರಗಳ ಮೇಲಾವರಣ ಆಕರ್ಷಿಸಿತು. ನಾವು ಚಾರಣ ನಡೆಸಿದ್ದು ನವೆಂಬರ್ ತಿಂಗಳಲ್ಲಾದ್ದರಿಂದ ರೋಡೋಡೆಂಡ್ರಾನ್ ಹೂವುಗಳ ಅಂದವನ್ನು ಕಣ್ತುಂಬಿಕೊಳ್ಳುವ ಅವಕಾಶದಿಂದ ವಂಚಿತರಾದೆವು.

ಫೆಡಾಂಗ್–ಜೋಂಗ್ರಿ ಮಧ್ಯೆ ಸಿಗುವ 'ದೇವರಾಲಿ' ಚಾರಣದ 3 ಕಿ.ಮೀ. ಸಂಪೂರ್ಣ ಏರು ಹಾದಿಯಾಗಿದ್ದು, ಚಾರಣ ಶ್ರಮದಿಂದ ಕೂಡಿತ್ತು. ನೇಪಾಳಿ ಭಾಷೆಯಲ್ಲಿ ದೇವರಾಲಿ ಎಂದರೆ ಪ್ರಾರ್ಥನಾ ಸ್ಥಳ. 'ಹಿಮಾಲಯನ್ ಸೋನಲ್' ಪಕ್ಷಿಗಳು ಆ ಪ್ರದೇಶದಲ್ಲಿವೆಯೆಂದು ಅಲ್ಲಿ ಅಳವಡಿಸಲಾಗಿದ್ದ ಫಲಕದಿಂದ ತಿಳಿಯಿತಾದರೂ ಕೇವಲ ದೂರದಲ್ಲಿ ಪಕ್ಷಿಗಳ ಕಲರವ ಕೇಳಿಬರುತ್ತಿತ್ತು. ಆ ಪ್ರದೇಶದಲ್ಲಿ ಧನಾತ್ಮಕ ಶಕ್ತಿಯನ್ನು ತುಂಬಲು ಬೌದ್ಧ ಧರ್ಮದ ಮಂತ್ರಗಳನ್ನು ಬರೆದಿರುವ ವಿವಿಧ ಬಣ್ಣಗಳ ಪತಾಕೆಗಳನ್ನು ಸಾಲಾಗಿ ಕಟ್ಟಿದ್ದರು.



ಜೋಂಗ್ರಿ ಶಿಬಿರ ತಲುಪುವಾಗ 5 ಗಂಟೆ. ಮರುದಿನ ಬೆಳಿಗ್ಗೆ ಉಪಾಹಾರ ಮುಗಿಸಿ ಜೋಂಗ್ರಿ ಟಾಪ್‌ನತ್ತ ಚಾರಣ ಪ್ರಾರಂಭಿಸಿದೆವು. ಹುಲ್ಲು ಒಣಗಿ ಕೆಂಪಾಗಿದ್ದು, ಗುಡ್ಡಗಳೆಲ್ಲವೂ ಕೆಂಪಾಗಿ ಕಾಣುತ್ತಿದ್ದವು. ಅಲ್ಲಲ್ಲಿ ನೆಟ್ಟು ಬೆಳೆಸಿದಂತೆ ಕಾಣುವ, ವೃತ್ತಾಕಾರದಲ್ಲಿ, ಕೇವಲ ಒಂದೆರಡು ಅಡಿಗಳಷ್ಟು ಎತ್ತರಕ್ಕೆ ಬೆಳೆದಿರುವ ಧೂಪ್ ಭಗೇರ ಗಿಡಗಳು ಮಾತ್ರ ಕಾಣುತ್ತಿದ್ದವು. ಎಲೆಗಳು ಸೂಜಿಯಂತೆ ಚೂಪಾಗಿದ್ದು ಪರಿಮಳಯುಕ್ತವಾಗಿದ್ದವು. ಸುಮಾರು ಎರಡು ಗಂಟೆಗಳ ಚಾರಣದ ನಂತರ ಜೋಂಗ್ರಿ ಟಾಪ್ ತಲುಪಿದೆವು. ಹಿಮದಿಂದ ಆವೃತ್ತವಾಗಿರುವ ಪರ್ವತಗಳ ಸಾಲನ್ನು ವಿಶಾಲವಾದ ಟೀವಿ ಪರದೆಯಲ್ಲಿ ನೋಡುತ್ತಿರುವ ಹಾಗೆ ಭಾಸವಾಗುತ್ತಿತ್ತು. ನೋಡ ನೋಡುತ್ತಿದ್ದಂತೆ ಪರ್ವತಗಳನ್ನು ಮೋಡಗಳು ಆವರಿಸಿ, ಐದು ಹತ್ತು ನಿಮಿಷಗಳಲ್ಲೇ ಮೋಡಗಳು ಸರಿದು ಹೋಗುವ ಆಟವನ್ನು ನೋಡುತ್ತಾ, ಹಿಮಪರ್ವತಗಳ ಸೌಂದರ್ಯವನ್ನು ಸವಿಯುತ್ತಿದ್ದೆವು. ನಂತರ ಜೋಂಗ್ರಿ ಶಿಬಿರದೆಡೆಗೆ ಹೊರಟೆವು.

ಬೆಳಗಾಗುತ್ತಲೇ ಬೇಗನೆ ಎದ್ದು ಕೊನೆಯ ಶಿಬಿರ ತಾನ್ಸಿಂಗ್‌ನತ್ತ ಜೋಂಗ್ರಿ ಟಾಪ್–ಕೋಕ್ಚುರಾಂಗ್ ಮಾರ್ಗವಾಗಿ ಚಾರಣ ಪ್ರಾರಂಭಿಸಿದೆವು. ದಾರಿಯಲ್ಲಿ ಸಿಗುವ ಬೌದ್ಧ ಧರ್ಮೀಯರ ಕೊನೆಯ ಮಾನೆಸ್ಟ್ರಿಯನ್ನು ವೀಕ್ಷಿಸಿದೆವು. ಸಂಜೆ ಹೊತ್ತಿಗೆ ತಾನ್ಸಿಂಗ್ ತಲುಪಿದೆವು. ಸೂರ್ಯೋದಯಕ್ಕೂ ಮುಂಚೆ ನಮ್ಮ ಗಮ್ಯಸ್ಥಳ 'ಗೋಚಲಾ' ಕಣಿವೆಯನ್ನು ತಲುಪಲು ಹಾಗೂ ಅಲ್ಲಿಂದ ಹಿಂದಿರುಗಲು ಒಟ್ಟು 16 ಕಿ.ಮೀ. ಚಾರಣ ನಡೆಸಬೇಕು. ಸೂರ್ಯೋದಯಕ್ಕೂ ಮುನ್ನ ಗೋಚಲಾ ತಲುಪಬೇಕಾದ್ದರಿಂದ ಸಂಜೆ 7 ಗಂಟೆಗೆ ಊಟ ಮುಗಿಸಿ ವಿಶ್ರಮಿಸಿದೆವು. ರಾತ್ರಿ 12 ಗಂಟೆಗೆ ನಿದ್ದೆಯಿಂದೆದ್ದು ಚಹಾ ಸೇವಿಸಿ ಚಾರಣ ಪ್ರಾರಂಭಿಸಿದೆವು. ಕೇವಲ ಹೆಡ್ ಲ್ಯಾಂಪ್ ಬೆಳಕಿನಲ್ಲಿ ಚಾರಣ ನಡೆಸುವ ಅನುಭವ ವಿಭಿನ್ನವಾಗಿತ್ತು.

ಗೋಚಲಾ ಚಾರಣದ ಹಾದಿಯಲ್ಲಿ ಸಿಗುವ ಸಮಿತಿ ಸರೋವರ ಮತ್ತೊಂದು ಪ್ರಮುಖ ಆಕರ್ಷಣೆ. ಎತ್ತರದ ಪ್ರದೇಶದಲ್ಲಿರುವ ಹಿಮಪರ್ವತಗಳ ಹಿಮ ಕರಗಿ ಭೂಮಿಯೊಳಗಿನಿಂದ ಹರಿದು ಬರುವ ಸ್ಫಟಿಕದಂತೆ ಶುಭ್ರವಾದ ನೀರಿನಿಂದ ಸಮಿತಿ ಸರೋವರದ ನಿರ್ಮಾಣವಾಗಿದೆ. ಸರೋವರದ ಅಂಚಿನಲ್ಲಿ 2 ಕಿ.ಮೀ. ದೂರ ಚಾರಣ ನಡೆಸಿ ನಂತರ 75 ಡಿಗ್ರಿ ಕೋನದ ಬೆಟ್ಟದಲ್ಲಿ 3 ಕಿ.ಮೀ. ಚಾರಣ ನಡೆಸಿ ಬೆಳಿಗ್ಗೆ 5.30ಕ್ಕೆ ಗೋಚಲಾ ತಲುಪಿದೆವು. ಸೂರ್ಯೋದಯ ಸಮಯದ ಪರ್ವತಗಳ ಸೌಂದರ್ಯವನ್ನು ಕಣ್ತುಂಬಿಕೊಳ್ಳಲೆಂದೇ ಶ್ರಮಪಟ್ಟು ಚಾರಣ ನಡೆಸಿದ್ದೆವು. ಸೂರ್ಯ ಉದಯಿಸಲು ಪ್ರಾರಂಭವಾದಾಗ ಬಂಗಾರದ ವರ್ಣದಲ್ಲಿ ಕಾಣಿಸುವ ಪರ್ವತಗಳು ಸೂರ್ಯೋದಯದ ನಂತರ ಸಂಪೂರ್ಣ ಬಿಳಿ ಬಣ್ಣಕ್ಕೆ ತಿರುಗುವ ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾದೆವು. ಕೇವಲ ಅರ್ಧಗಂಟೆ ಕಾಂಚನ ಜುಂಗಾ ಮತ್ತು ಸುತ್ತಮುತ್ತಲಿನ ಪಾಂಡಿಮ್, ತಾಲುಂಗ್, ಸಿಮ್ವೋ, ಕಾಬ್ರು, ರಾಥೋಂಗ್, ಕೋಕ್ತಾಂಗ್ ಮೊದಲಾದ ಪರ್ವತಗಳ ಸೂರ್ಯೋದಯದ ಸೌಂದರ್ಯವನ್ನು ಕಣ್ತುಂಬಿಕೊಂಡು ಕೃತಾರ್ಥರಾದೆವು.

ಸೂರ್ಯೋದಯದ ನಂತರದ ಕ್ಷಣಗಳಲ್ಲಿ ಸಮಿತಿ ಸರೋವರದ ನೀರಿನಲ್ಲಿ ಕಾಣಸಿಗುವ ಪಾಂಡಿಮ್ ಪರ್ವತದ ಪ್ರತಿಬಿಂಬ ನೋಡಲು ಎರಡು ಕಣ್ಣುಗಳು ಸಾಲದು. ರಾತ್ರಿಯಿಡೀ ಚಾರಣ ನಡೆಸಿ ಬಳಲಿದ್ದ ನಾವು ಸರೋವರದ ಪರಿಸರದಲ್ಲಿ ವಿಶ್ರಮಿಸಿದೆವು. ನಂತರ ಚಾರಣವನ್ನು ಶಿಬಿರದತ್ತ ಮುಂದುವರೆಸಿದೆವು. ಶಿಬಿರ ತಲುಪುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ಅಲ್ಲಿಂದ ಒಂದು ದಿನದ ನಂತರ ಸಂಜೆಯಷ್ಟರಲ್ಲಿ ಯುಕ್ಸೋಮ್ ತಲುಪಿದೆವು.

ಏಪ್ರಿಲ್–ಮೇ ಹಾಗೂ ಸೆಪ್ಟೆಂಬರ್‌ನಿಂದ ನವೆಂಬರ್ ಮಧ್ಯಭಾಗದವರೆಗೆ ಗೋಚಲಾ ಚಾರಣಕ್ಕೆ ಸೂಕ್ತ ಸಮಯ. ಈ ಸಮಯದಲ್ಲಿ ಆಕಾಶವು ಸಂಪೂರ್ಣವಾಗಿ ಶುಭ್ರವಾಗಿರುವುದರಿಂದ ಸೂರ್ಯೋದಯ, ಸೂರ್ಯಾಸ್ತದ ಕ್ಷಣಗಳನ್ನು ಸೆರೆಹಿಡಿಯಬಹುದು.

ಪ್ರತಿಕ್ರಿಯಿಸಿ: feedback@sudha.co.in